ಲ್ಯಾಂಡ್‌ಸ್ಕೇಪುಗಳಲ್ಲಿ ಎರಡೇ ಆಯಾಮ ಇರ್ತದ. ಅಮೂರ್ತದೊಳಗ ನಾಲ್ಕು ಡೈಮೆನ್‌ಶನ್ ಇರ್ತವ. ಈ ಅಮೂರ್ತಕ್ಕ ಹಳೇಜನ, ಹೊಸಪೀಳಿಗೆ ಇನ್ನೂ ಒಗ್ಗಿಕೊಂಡಿಲ್ಲ. ಹಂಗಾಗಿ ಪೊಟ್ರೈಟ್ ಮತ್ತು ಲ್ಯಾಂಡ್‌ಸ್ಕೇಪಿಗೆ ಸಿಗುವಂಥ ಬೆಲಿ ಇದಕ್ಕೆ ಸಿಗ್ತಾಯಿಲ್ಲ. ಆದರೆ ನಿಜವಾದ ಚಿತ್ರಕಲೆ ಇದೇ.

◆ **ನಿಮ್ಮ ಪ್ರಿಯರಾದ ಕಲಾವಿದರು ಯಾರು?**

ಈ ಚಿತ್ರಕಲೆ ಬಂದಿದ್ದು ಎರಡನೇ ಮಹಾಯುದ್ಧ ಆದ ನಂತರ. ಆಗ ಅನೇಕ ಕಲಾವಿದರು ಯೂರೋಪು ಬಿಟ್ಟು ಅಮೆರಿಕಕ್ಕೆ ಹೋದರು. ಅಲ್ಲಿ ಹೋದಾಗ ಅಲ್ಲಿ ಸಿಕ್ಕಂಥ ಸ್ವಾತಂತ್ರ್ಯದ ವಾತಾವರಣ ಏನದ, ಅದನ್ನ ತಗೊಂಡು ಪೇಂಟಿಂಗ್ ಶುರು ಮಾಡಿದರು. ಭಾರತದೊಳಗ ಇಂಥ ಪೇಂಟಿಂಗ್ಸ್ ಮಾಡೋರು ಬಹಳ ಕಡಿಮೆ ಇದ್ದಾರ. ರಾಮಕುಮಾರ್ ಅಂತ, ದಿಲ್ಲಿಯೊಳಗ ಇದ್ದರು. ಭಾಳ ದೊಡ್ಡ ಪೈಂಟರ್. ಗಾಯತೊಂಡೆ ಮತ್ತು ಮಹಮದ್ ರಝಾ ನನಗ ಪ್ರಿಯವಾದ ಕಲಾವಿದರು.

◆ **ಎರಡು ವಿಭಿನ್ನ ಮಾಧ್ಯಮಗಳ ಜತೆ ಕೆಲಸ ಮಾಡಿದಿರಿ. ಅವು ಪರಸ್ಪರ ಹೇಗೆ ಪೂರಕವಾಗಿರುತ್ತವೆ?**

ಬರವಣಿಗೆಯೊಳಗ ಭಾಷೆ ಕಲರ್‌ಫುಲ್ ಆಗೋದು, ಅದರಲ್ಲಿದ್ದ ಲವಲವಿಕೆ ಆ ಚಿತ್ರಕಲೆ ಮುಖಾಂತರಾನೇ ನನಗ ಸಿಕ್ತದ. ಆ ಸೆನ್ಸಿಬಲಿಟಿ ಇತ್ತೂ ಅಂತಂದರ ನಮ್ಮ ಬರವಣಿಗೆಯಲ್ಲಿ ಕೂಡಾನು ಅದು ಬಂದುಬಿಡ್ತದ. ಆದರೆ ನನಗ ಅತ್ಯಂತ ಪ್ರಿಯವಾಗಿದ್ದೇ ಪೇಂಟಿಂಗ್ಸ್! ಇದೇ ಕಾವ್ಯ ಬರೀಲಿಕ್ಕೆ ಗದ್ಯ ಬರೀಲಿಕ್ಕೆ ಪ್ರೇರಣೆ ಕೊಡ್ತದ. ಸಂಗೀತ ಪೇಂಟಿಂಗ್ಸ್ ಫಿಲಾಸಫಿ ಇವೆಲ್ಲ ಬರಹಕ್ಕೆ ಇಂಟರ್



ಕುಸನೂರರ ಒಂದು ಅಮೂರ್ತ ಕಲಾಕೃತಿ